2017 ಕ.ತೀ.ವ. 1183

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಯಂತ್ ಪಟೇಲ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್

## ಭಾರತ ಒಕ್ಕೂಟ, (ನೈಋತ್ಯ ರೈಲ್ವೆ, ಹುಬ್ಬಳ್ಳಿ) ಮತ್ತು ಇತರರು –ವಿರುದ್ಧ– ಶ್ರೀಮತಿ ಆರ್. ಲಕ್ಷ್ಮಿದೇವಮ್ಮ ಮತ್ತು ಮತ್ತೊಬ್ಬರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

ಕೇಂದ್ರ ಆಡಳಿತಾತ್ಮಕ ನ್ಯಾಯಾಧಿಕರಣವು (ಇಲ್ಲಿ ಇನ್ನು ಮುಂದೆ ಸಂಕ್ಷಿಪ್ತತೆಯ ಕಾರಣದಿಂದ ನ್ಯಾಯಾಧಿಕರಣವೆಂದು ಉಲ್ಲೇಖಿಸಲಾಗಿದೆ) ಹೊರಡಿಸಿದ ದಿನಾಂಕ 13.05.2015ರ ಆದೇಶದ ವಿರುದ್ಧ ಪ್ರಸ್ತುತ ಅರ್ಜಿಯನ್ನು ಸಲ್ಲಿಸಲಾಗಿದ್ದು, ಈ ಆದೇಶದಲ್ಲಿ ದಾಖಲಿಸಲಾದ ಕಾರಣಗಳಿಗಾಗಿ ನ್ಯಾಯಾಧಿಕರಣವು ಪುನರ್‌ಪರಿಶೀಲನಾ ಅರ್ಜಿಯನ್ನು ಪುರಸ್ಕರಿಸಿದ್ದು, ವಿಧಿಸಲಾದ ಕಾಲಪರಿಮಿತಿಯೊಳಗೆ ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಎರಡನೇ ಅರ್ಜಿದಾರನನ್ನು ಪರಿಗಣಿಸಲು ಎದುರುದಾರರಿಗೆ ಸೂಚಿಸುವ ಮೂಲಕ ಮುಖ್ಯ ಮೂಲ ಅಪೀಲನ್ನು ಪುರಸ್ಕರಿಸಿದೆ.

ಪುನರ್ ಪರಿಶೀಲನಾ ಅಧಿಕಾರವನ್ನು, ದಾಖಲೆಯ ಎದುರಿನಲ್ಲಿ, ದೋಷಯುಕ್ತವೆನ್ನುವಷ್ಟರ ಮಟ್ಟಿಗೆ ಮೇಲುನೋಟಕ್ಕೆ ಸೀಮಿತಗೊಳಿಸಲಾಗಿದೆ ಎಂಬುದನ್ನು ಸಹ ನಾವು ದಾಖಲಿಸಬಹುದಾಗಿದ್ದು, ಇದನ್ನು ಮರೆಮಾಚುವ ಅಪೀಲಾಗಿರುವುದಿಲ್ಲ. ಪುನರ್ ಪರಿಶೀಲನಾ ಅಧಿಕಾರ ವ್ಯಾಪ್ತಿಯ ವ್ಯಾಪ್ತಿ ಮತ್ತು ಎಲ್ಲೆಯನ್ನು ಪರಿಗಣಿಸಿದರೆ, ಮುಖ್ಯ ಮೂಲ ಅಪೀಲಿನಲ್ಲಿ ದಿನಾಂಕ 25.07.2013 ರ ಮೊದಲಿನ ಆದೇಶಗಳ

* ರಿಟ್ ಅರ್ಜಿ ಸಂ. 37642/2015 (ಎಸ್–ಸಿಎಟಿ) ದಿನಾಂಕ: 14ನೇ ನವೆಂಬರ್, 2016.

ಗುಣಾವಗುಣಗಳ ಆಧಾರದ ಮೇಲೆ ಅರ್ಜಿಯನ್ನು ವಾದವನ್ನು ಒಪ್ಪಿಕೊಳ್ಳದಿದ್ದಾಗ ಅದರ ಕಾರಣ ಮಾತ್ರದಿಂದಲೇ ತರುವಾಯವಾಗಿ, ಸಿವಿಲ್ ನ್ಯಾಯಾಲಯದಲ್ಲಿ ಉದ್ಭವಗೊಂಡ ಕೆಲವು ವ್ಯವಹರಣೆಗಳಿಗೆ ಮೊದಲಿನ ಆದೇಶವನ್ನು ಪುನರ್ ಪರಿಶೀಲನಾ ಸಿಂಧುವಾದ ಆಧಾರವಿರಲಿಲ್ಲ. ಅಷ್ಟೇ ಅಲ್ಲದೆ, ಸೇವಾ ಪ್ರಯೋಜನದ ಮೂಲಕ ಆಸ್ತಿಯ ಉತ್ತರಾಧಿಕಾರಕ್ಕಾಗಿ ಮಕ್ಕಳ ಹಕ್ಕುಗಳನ್ನು ಅಥವಾ ಅನ್ಯಥಾ ಸೇವಾ ಷರತ್ತಿನ ರೂಪದ ಅನುಕಂಪದ ನೇಮಕಾತಿಗೆ ಉಪಬಂಧವನ್ನು ಸಮೀಕರಿಸಲು ಸಾಧ್ಯವಾಗುವುದಿಲ್ಲ. ನ್ಯಾಯಾಧಿಕರಣವು, ಪರಿಷ್ಕರಣೆಗೆ ಸಂಬಂಧಿಸಿದ ಆಯಾಮಗಳನ್ನು ಪರಿಗಣಿಸುವಾಗಲೂ ಸಹ ಹಿಂದೆ ಹೇಳಲಾದ ಆಯಾಮಗಳನ್ನು ಪರಿಗಣಿಸಿಲ್ಲ. ನಮ್ಮ ಪರಿಗಣಿತ ದೃಷ್ಟಿಯಲ್ಲಿ, ಪುನರ್ ಪರಿಶೀಲನಾ ಅಧಿಕಾರವನ್ನು ಚಲಾಯಿಸುವಾಗ ನ್ಯಾಯಾಧಿಕರಣವು ಪುನರ್ ಪರಿಶೀಲನಾ ವ್ಯಾಪ್ತಿಯನ್ನು ಮೀರಿ ಹೋಗಿರುವುದರಿಂದ ಆದೇಶವು ಅಧಿಕಾರವ್ಯಾಪ್ತಿಯನ್ನು ಮೀರಿದೆಯೆಂದು ಹೇಳಬಹುದಾಗಿರುತ್ತದೆ.

ಮೇಲೆ ಹೇಳಲಾದುದನ್ನು ದೃಷ್ಟಿಯಲ್ಲಿಟ್ಟುಕೊಂಡು, ದಿನಾಂಕ 13.05.2015ರ 'ಸಿ' ಅನುಬಂಧದ ಪುನರ್ ಪರಿಶೀಲನಾ ಅರ್ಜಿಯನ್ನು ಪರಿಗಣಿಸಿ ಕೆಳಗಿನ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವು ರದ್ದುಗೊಳಿಸಲು ತಕ್ಕುದಾಗಿದ್ದು, ಇದನ್ನು ತಳ್ಳಿಹಾಕಲಾಗಿದೆ. ಹಾಗಾಗಿ, ಇದನ್ನು ರದ್ದುಗೊಳಿಸಲಾಗಿದೆ ಮತ್ತು ತಳ್ಳಿಹಾಕಲಾಗಿದೆ. ಫಲಿತಾಂಶವಾಗಿ, ಪುನರ್ ಪರಿಶೀಲನಾ ಅರ್ಜಿಯು ವಜಾಗೊಂಡಿದೆಯೆಂದು ಭಾವಿಸತಕ್ಕದ್ದು. ಮೇಲೆ ಹೇಳಲಾದ ವ್ಯಾಪ್ತಿಯ ಮಟ್ಟಿಗೆ ಅರ್ಜಿಯನ್ನು ಪುರಸ್ಕರಿಸಲಾಗಿದೆ. ನಿಯಮವನ್ನು ನಿರುಪಾದಿಕಗೊಳಿಸಲಾಗಿದೆ. ರಿಟ್ ಅರ್ಜಿಯನ್ನು ಅಂಗೀಕರಿಸಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು:* *ಪ್ಯಾರಾಗಳಲ್ಲಿ*

1. *ರಿಟ್ ಅರ್ಜಿ ಸಂ. 45392/2013, ದಿನಾಂಕ: 22.02.2016*
   *ಭಾರತ ಒಕ್ಕೂಟ –ವಿರುದ್ಧ– ಶ್ರೀಮತಿ ನಿತ್ಯಾ ಎಸ್.ಇ. (ಉಲ್ಲೇ) 11*

*2. ರಿಟ್ ಅರ್ಜಿ ಸಂ. 37318/2016, ದಿನಾಂಕ: 27.09.2016*
*ಮಹಮದ್ ಘೋಷ್ –ವಿರುದ್ಧ– ಭಾರತ ಒಕ್ಕೂಟ (ಉಲ್ಲೇ) 13*

ಅರ್ಜಿದಾರರ ಪರ : ಶ್ರೀ ಅಭಿನಯ್ ವೈ.ಟಿ, ವಕೀಲರು
1 ಮತ್ತು 2ನೇ ಪ್ರತ್ಯರ್ಜಿದಾರರ ಪರ : ಶ್ರೀ ಇಜರ್ ಅಹ್ಮದ್, ವಕೀಲರು

**ಆಜ್ಞೆ**

**ನ್ಯಾಯಮೂರ್ತಿ ಜಯಂತ್ ಪಟೇಲ್**:

ನಿಯಮ.

2. ಎದುರುದಾರ ಸಂ.1 ಮತ್ತು 2ರ ಪರವಾಗಿ, ಮಾನ್ಯ ಶ್ರೀ ಇಜಾರ್ ಅಹ್ಮದ್‌ರವರು ಹಾಜರಾಗಿದ್ದು, ನೋಟೀಸ್‌ನ ನಿಯಮವನ್ನು ಬಿಟ್ಟುಕೊಟ್ಟಿದ್ದಾರೆ.

3. ಕೇಂದ್ರ ಆಡಳಿತಾತ್ಮಕ ನ್ಯಾಯಾಧಿಕರಣವು (ಇಲ್ಲಿ ಇನ್ನು ಮುಂದೆ ಸಂಕ್ಷಿಪ್ತತೆಯ ಕಾರಣದಿಂದ 'ನ್ಯಾಯಾಧಿಕರಣ'ವೆಂದು ಉಲ್ಲೇಖಿಸಲಾಗಿದೆ) ಹೊರಡಿಸಿದ ದಿನಾಂಕ 13.05.2015 ರ ಆದೇಶದ ವಿರುದ್ಧ ಪ್ರಸ್ತುತ ಅರ್ಜಿಯನ್ನು ಸಲ್ಲಿಸಲಾಗಿದ್ದು, ಈ ಆದೇಶದಲ್ಲಿ ದಾಖಲಿಸಲಾದ ಕಾರಣಗಳಿಗಾಗಿ ನ್ಯಾಯಾಧಿಕರಣವು ಪುನರ್‌ಪರಿಶೀಲನಾ ಅರ್ಜಿಯನ್ನು ಪುರಸ್ಕರಿಸಿದ್ದು, ವಿಧಿಸಲಾದ ಕಾಲಪರಿಮಿತಿಯೊಳಗೆ ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಎರಡನೇ ಅರ್ಜಿದಾರನನ್ನು ಪರಿಗಣಿಸಲು ಎದುರುದಾರರಿಗೆ ಸೂಚಿಸುವ ಮೂಲಕ ಮುಖ್ಯ ಮೂಲ ಅಪೀಲನ್ನು ಪುರಸ್ಕರಿಸಿದೆ.

4. ಪ್ರಾರಂಭಿಕವಾಗಿ, ಮೂ.ಅ. ಸಂ. 587/2013ನ್ನು ಎದುರುದಾರ ಸಂ.2ರ ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಎದುರುದಾರರು ಹೂಡಿದ್ದರೆಂಬುದು ಪ್ರಕರಣದ ಸಂಬಂಧಪಟ್ಟ ಸಂಕ್ಷಿಪ್ತ ಪ್ರಸಕ್ತ ಸಂಗತಿಗಳಾಗಿವೆ, ಇದರೊಂದಿಗೆ

ವಿ. ನಾಗರಾಜ್ ಎಂಬೊಬ್ಬರು, ಮೂರು ಜನ ಪತ್ನಿಯರನ್ನು ಅಗಲಿದ್ದ ದಿನಾಂಕ 11.10.1998ರಂದು ಮೃತರಾದ ಅರ್ಜಿದಾರರ ನೌಕರನಾಗಿದ್ದನೆಂದು ವಾದಿಸಿದ್ದಾರೆಂಬುದು ಕಂಡುಬಂದಿದೆ. ಈ ಮೊದಲು ನ್ಯಾಯಾಧಿಕರಣವು, ಎರಡನೇ ಪತ್ನಿಯ ಮಗಳಾದ ಕುಮಾರಿ ಅನಿತಾ ಎಸ್.ಎನ್ ರನ್ನು ಅನುಕಂಪದ ಆಧಾರದ ನೇಮಕಾತಿಗೆ ಪರಿಗಣಿಸಿತ್ತೆಂದು ಸೂಚಿಸಿತ್ತೆಂದು ನಿವೇದಿಸಿದ್ದರು. ಆದಾಗ್ಯು ಎರಡನೇ ಹೆಂಡತಿಯ ಮಗಳು, ವೈದ್ಯಕೀಯವಾಗಿ ಸೂಕ್ತಳಲ್ಲವೆಂದು ಕಂಡುಬಂದಿದ್ದು, ಇಲ್ಲಿ ಮೂರನೇ ಪತ್ನಿಯ ಮಗನಾಗಿರುವ ಎದುರುದಾರ ಸಂ. 2ನ್ನು ಅನುಕಂಪದ ಆಧಾರದ ಮೇಲಿನ ನೇಮಕಾತಿಗೆ ಅರ್ಹನೆಂದು ಪರಿಭಾವಿಸಿ ಕೋರಿಕೊಂಡಿದ್ದು, ಅರ್ಜಿದಾರರನ್ನು ಇದಕ್ಕೆ ಪರಿಗಣಿಸಬೇಕೆಂದು ಸೂಚಿಸಲಾಗಿದೆ. ಸದರಿ ಮೂಲ ಅಪೀಲಿನಲ್ಲಿ ದಿನಾಂಕ 25.07.2013 ರಂದು ಆದೇಶದ ಪ್ರಕಾರ ಹಿರಿಯ ಮಗನು ಅನುಕಂಪದ ಆಧಾರದ ಮೇಲಿನ ನೇಮಕಾತಿಗೆ ಹಕ್ಕುಳ್ಳವನಾಗಿರುವನು ಎಂಬ ನಿಯಮ ಇರುವುದಿಲ್ಲವೆಂಬುದು ನ್ಯಾಯಾಧಿಕರಣಕ್ಕೆ ಕಂಡುಬಂದಿದ್ದು ನ್ಯಾಯಾಧಿಕರಣಕ್ಕೆ, ಮೂರನೇ ಹೆಂಡತಿಯ ಮಕ್ಕಳಿಗೆ ಉದ್ಯೋಗವನ್ನು ಒದಗಿಸುವ ಸಂಬಂಧದಲ್ಲಿ ಮುಂದಿಡಲಾದ ನಿಯಮ ಇಲ್ಲದಿರುವಾಗ, ಇಲ್ಲಿ 2ನೇ ಸಂಖ್ಯೆಯ ಎದುರುದಾರನಾಗಿರುವ ಇಲ್ಲಿ ಎರಡನೇ ಅರ್ಜಿದಾರನು, ದಿವಂಗತ ಶ್ರೀ ವಿ. ನಾಗರಾಜ್ ರವರ ಹಿರಿಯ ಮಗನೆಂದು ತನ್ನನ್ನು ಅನುಕಂಪದ ಆಧಾರದ ನೇಮಕಾತಿಗೆ ಪರಿಗಣಿಸಬೇಕೆಂದು ವಾದಿಸಲು ಸಾಧ್ಯವಿಲ್ಲವೆಂಬುದೂ ಸಹ ಕಂಡುಬಂದಿದೆ. ಅಂತಿಮವಾಗಿ ನ್ಯಾಯಾಧಿಕರಣವು, 10,000/– ರೂ.ಗಳ ವೆಚ್ಚದೊಂದಿಗೆ ಅರ್ಜಿಯನ್ನು ವಜಾಗೊಳಿಸಲಾಗಿದೆ.

5. ತರುವಾಯದಲ್ಲಿ ಮೇಲೆ ಹೇಳಲಾದ ನ್ಯಾಯಾಧಿಕರಣದ ಆದೇಶದ ವಿರುದ್ಧ ಸಂ.1/2014 ಆಗಿರುವ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ನ್ಯಾಯಾಧಿಕರಣವು ಪುನರ್ ಪರಿಶೀಲನಾ ಅರ್ಜಿಯಲ್ಲಿ, ಅರ್ಜಿದಾರನ ತಂದೆಯು ಎರಡನೇ ವಿವಾಹಕ್ಕೆ ರೈಲ್ವೆಯಿಂದ ಅನುಮತಿಯನ್ನು ಪಡೆದುಕೊಂಡಿರಲಿಲ್ಲವೆನ್ನುವ ಸಂಗತಿ ಕಂಡುಬಂದಿದ್ದು ಇದನ್ನು ಈಗಾಗಲೇ ಪರಿಗಣಿಸಲಾಗಿತ್ತು, ಆದುದರಿಂದ, ಇಲ್ಲಿ ಹಿರಿಯ ಮಗನಾಗಿರುವ ಎರಡನೇ

ಎದುರುದಾರನು ಅನುಕಂಪ ಆಧಾರದ ನೇಮಕಾತಿಗೆ ಹಕ್ಕುಳ್ಳವನಾಗಿದ್ದನೆಂಬುದು ಕಂಡುಬಂದಿರುತ್ತದೆ. ನ್ಯಾಯಾಧಿಕರಣವು ಮುಖ್ಯವಾಗಿ, ಮಕ್ಕಳ ಔರಸತೆ ಅಥವಾ ಅನೌರಸತೆಯು ವಿವಾದಾಂಶವಾಗಿಲ್ಲ ಎನ್ನುವುದರ ಆಧಾರದ ಮೇಲೆ ಮುಂದುವರಿದಿರುತ್ತದೆ. ಔರಸ ಮತ್ತು ಅನೌರಸ ಮಕ್ಕಳ ನಡುವೆ ಭೇದ ಭಾವ ಇರುವುದಿಲ್ಲ, ಎಲ್ಲಾ ಮಕ್ಕಳನ್ನು ಸಮಾನವಾಗಿ ಪರಿಗಣಿಸಬೇಕಾಗುತ್ತದೆ. ಆದುದರಿಂದ ನ್ಯಾಯಾಧಿಕರಣವು ಪುನರ್ ಪರಿಶೀಲನಾ ಅರ್ಜಿಯನ್ನು ಪುರಸ್ಕರಿಸಿದೆ ಮತ್ತು ಮೂಲ ಅಪೀಲನ್ನು ಸಹ ಪುರಸ್ಕರಿಸಿದ್ದು, ಅಷ್ಟೇ ಅಲ್ಲದೆ, ಅನುಕಂಪದ ನೇಮಕಾತಿಗೆ ಇಲ್ಲಿ ಎರಡನೇ ಎದುರುದಾರನನ್ನು ಇಲ್ಲಿ ಪರಿಗಣಿಸಲು ಎದುರುದಾರರಿಗೆ ಸೂಚಿಸಿದೆ. ಸನ್ನಿವೇಶಗಳ ಅಡಿಯಲ್ಲಿ ಪ್ರಸ್ತುತ ಅರ್ಜಿಯು ಈ ನ್ಯಾಯಾಲಯದ ಮುಂದಿರುತ್ತದೆ.

6. ನಾವು ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಅಭಿನಯ್ ವೈ.ಟಿ. ಮತ್ತು ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಶ್ರೀ ಐಜರ್ ಅಹ್ಮದ್‌ರವರ ವಾದವನ್ನು ಆಲಿಸಿದ್ದೇವೆ.

7. ಹಾಗೆಯೇ, ಮೃತ ಸರ್ಕಾರಿ ನೌಕರ ಶ್ರೀ ವಿ. ನಾಗರಾಜ್‌ನು ರೈಲ್ವೆಯಿಂದ ಅನುಮತಿ ಪಡೆದುಕೊಂಡ ನಂತರ ಎರಡನೇ ವಿವಾಹವನ್ನು ಅಥವಾ ಮೂರನೇ ವಿವಾಹವನ್ನು ಮಾಡಿಕೊಂಡಿರಲಿಲ್ಲವೆಂಬ ಸ್ಥಿತಿಯಲ್ಲಿ ಯಾವುದೇ ವಿವಾದವಿರುವುದಿಲ್ಲ. ಅಷ್ಟೇ ಅಲ್ಲದೆ, ಮೃತ ಶ್ರೀ ವಿ. ನಾಗರಾಜನು 11.10.1998 ರಷ್ಟು ಹಿಂದೆಯೇ ಮರಣಹೊಂದಿದ್ದು ಸುಮಾರು 18 ವರ್ಷಗಳು ಇಂದಿಗೆ ಕಳೆದುಹೋಗಿದ್ದು, ನ್ಯಾಯಾಧಿಕರಣದ ಮುಂದೆ ಅರ್ಜಿಯನ್ನು ಸಲ್ಲಿಸಿದ ದಿನಾಂಕವನ್ನು ನಾವು ಪರಿಗಣಿಸಿದರೆ, ಸುಮಾರು 15 ವರ್ಷಗಳು ಸಹ ಕಳೆದುಹೋಗಿರುತ್ತಿದ್ದವು.

8. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ದಿನಾಂಕ 02.01.1992 ರ ರೈಲ್ವೆಯ ಸುತ್ತೋಲೆ ಪ್ರಕಾರ ರೈಲ್ವೆಯ ಅನುಮತಿ ಪಡೆದುಕೊಂಡ ನಂತರ ವಿವಾಹವು ನೆರವೇರಿದ್ದ ಹೊರತು ಎರಡನೇ ಅಥವಾ ಮೂರನೇ ಹೆಂಡತಿಯ

ಮಕ್ಕಳು ಅನುಕಂಪದ ಆಧಾರದ ನೇಮಕಾತಿಗೆ ಹಕ್ಕುಳ್ಳವರಾಗಿರುವುದಿಲ್ಲ. ಅಷ್ಟೇ ಅಲ್ಲದೆ, ಗಣನೀಯ ಸಮಯದ ಅವಧಿ ಕಳೆದುಹೋಗಿದ್ದು ಅನುಕಂಪ ಆಧಾರದ ನೇಮಕಾತಿಯನ್ನು, ಅಂಥ ದೀರ್ಘಕಾಲದ ತರುವಾಯ ಪರಿಗಣಿಸಲು ಸಾಧ್ಯವಿಲ್ಲವೆಂದು ಅವರು ನಿವೇದಿಸಿದ್ದಾರೆ. ಅವರು ಈ ನ್ಯಾಯಾಲಯದ ನಿರ್ಣಯಗಳನ್ನು ಅವಲಂಬಿಸಿದ್ದು, ಇದನ್ನು ಇಲ್ಲಿ ಇನ್ನುಮುಂದೆ ನಾವು ಪರಿಗಣಿಸಬೇಕು. ಅವರು, ಎರಡನೇ ಎದುರುದಾರನ ಅನುಕಂಪದ ನೇಮಕಾತಿಯ ಪರಿಗಣನೆಗಾಗಿ ನ್ಯಾಯಾಧಿಕರಣವು, ಪುನರ್ ಪರಿಶೀಲನಾ ಅಧಿಕಾರ ವ್ಯಾಪ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರ್ದೇಶಿಸುವುದು ಸಾಧ್ಯವಿಲ್ಲವೆಂದು ಸಹ ಅವರು ನಿವೇದಿಸಿದ್ದಾರೆ. ಆದುದರಿಂದ, ಈ ನ್ಯಾಯಾಲಯವು, ಪುನರ್ ಪರಿಶೀಲನಾ ಅರ್ಜಿಯನ್ನು ಪರಿಗಣಿಸಿ ಅಧೀನ ನ್ಯಾಯಾಧಿಕರಣವು ಹೊರಡಿಸಿದ ಆದೇಶವನ್ನು ತಳ್ಳಿ ಹಾಕಬಹುದೆಂದು ವಾದಿಸಿದ್ದಾರೆ.

9. ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ದಿನಾಂಕ 01.01.1992 ರ ಯಥಾರ್ಥ ಸುತ್ತೋಲೆಯನ್ನು, ನ್ಯಾಯಾಧಿಕರಣದ ಅಹ್ಮದಾಬಾದ್ ಪೀಠವು ಪರಿಗಣಿಸಿದೆಯೆಂದು ಮತ್ತು ನ್ಯಾಯಾಧಿಕರಣದ ಅಹ್ಮದಾಬಾದ್ ಪೀಠವು, ದಿನಾಂಕ 02.01.1992 ರ ಸುತ್ತೋಲೆಯ ಉದ್ದೇಶವನ್ನು ಸಾಧಿಸುವಲ್ಲಿ ಯಾವುದೇ ಸಂಬಂಧ ಹೊಂದಿಲ್ಲದಿರುವುದು ನ್ಯಾಯಾಧಿಕರಣಕ್ಕೆ ಕಂಡುಬಂದಿರುತ್ತದೆ. ಆದುದರಿಂದ, ನ್ಯಾಯಾಧಿಕರಣವು ಸುತ್ತೋಲೆಯನ್ನು ರದ್ದುಗೊಳಿಸಿದೆ ಅಷ್ಟೇ ಅಲ್ಲದೆ ಅನುಕಂಪ ಆಧಾರದ ನೇಮಕಾತಿಗಾಗಿ ಅರ್ಜಿದಾರನ ಪ್ರಕರಣವನ್ನು ಪರಿಗಣಿಸಲು ರೈಲ್ವೆಗೆ ಸೂಚಿಸಿದೆಯೆಂದು ನಿವೇದಿಸಿದ್ದಾರೆ. ಅಷ್ಟೇ ಅಲ್ಲದೆ, ಅವರು, ನ್ಯಾಯಾಧಿಕರಣದ ಹಿಂದಿನ ನಿರ್ಣಯವನ್ನು ವಿಶೇಷ ಸಿವಿಲ್ ಅಪೀಲು ಸಂ. 8545/2015 ರಲ್ಲಿ ಗುಜರಾತ್ ಉಚ್ಚ ನ್ಯಾಯಾಲಯದ ಮುಂದೆ ತರಲಾಗಿತ್ತು ಮತ್ತು ಗುಜರಾತ್ ಉಚ್ಚ ನ್ಯಾಯಾಲಯವು ದಿನಾಂಕ 23.07.2015 ರ ಆದೇಶದ ಪ್ರಕಾರ ರೈಲ್ವೆಯ ಅರ್ಜಿಯನ್ನು ವಜಾಗೊಳಿಸಿತ್ತು ಮತ್ತು ನ್ಯಾಯಾಧಿಕರಣದ ಆದೇಶವನ್ನು ಸ್ಥಿರಪಡಿಸಿತು ಎಂದು ನಿವೇದಿಸಿದ್ದಾರೆ. ಅವರು, ನ್ಯಾಯಾಧಿಕರಣದ ಮತ್ತೊಂದು ಪೀಠವು

ಇದನ್ನು ಈಗಾಗಲೇ ರದ್ದುಗೊಳಿಸುವಾಗ ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಸುತ್ತೋಲೆ ಮೇಲೆ ನಂಬಿಕೆಯನ್ನು ಇಟ್ಟಿದ್ದಾರೆಂದು ಮತ್ತು ಗುಜರಾತ್ ಉಚ್ಚ ನ್ಯಾಯಾಲಯವು, ಇದರಲ್ಲಿ ಹಸ್ತಕ್ಷೇಪ ಮಾಡುವುದನ್ನು ಎದುರುದಾರರ ಹಕ್ಕುಗಳನ್ನು ಹತ್ತಿಕ್ಕಿದೆಯೆಂದು ಪರಿಗಣಿಸಲಾಗುವುದಿಲ್ಲ ಮತ್ತು ಆದುದರಿಂದ ಅರ್ಜಿಯನ್ನು ವಜಾಗೊಳಿಸಬಹುದಾಗಿದೆಯೆಂದು ಅವರು ನಿವೇದಿಸಿದ್ದಾರೆ.

10. ಮೊದಲಿಗೆ, ಮುಖ್ಯ ಮೂಲ ಅಪೀಲಿನಲ್ಲಿ ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ಆದೇಶವು ದಿನಾಂಕ 25.07.2013 ರ ಅನುಬಂಧ–'ಬಿ' ಮತ್ತು ಕೆಳಗಿನ ಪರಿಷ್ಕರಣಾ ಅರ್ಜಿಯು ದಿನಾಂಕ 13.05.2015 ರಲ್ಲಿದೆಯೆಂದು ನಾವು ದಾಖಲಿಸಬಹುದು. ನ್ಯಾಯಾಧಿಕರಣದ ಅಹ್ಮದಾಬಾದ್ ಪೀಠವು ಹೊರಡಿಸಿದ ಆದೇಶವು ದಿನಾಂಕ 18.03.2015 ಆಗಿದೆ. ಗುಜರಾತ್ ಉಚ್ಚ ನ್ಯಾಯಾಲಯವು ದಿನಾಂಕ 18.03.2015 ಆಗಿದ್ದು, ಗುಜರಾತ್ ಉಚ್ಚ ನ್ಯಾಯಾಲಯವು ದಿನಾಂಕ 23.07.2015 ರಂದು ಆದೇಶವನ್ನು ಹೊರಡಿಸಿರುವುದರಿಂದ, ಪುನರ್ ಪರಿಶೀಲನಾ ಅರ್ಜಿಯ ಪ್ರಶ್ನಿತ ಆದೇಶದಲ್ಲಿ ಅಧೀನ ನ್ಯಾಯಾಧಿಕರಣವು, ಸುತ್ತೋಲೆಯನ್ನು ರದ್ದು ಮಾಡುವುದಕ್ಕಾಗಿ ನ್ಯಾಯಾಧಿಕರಣದ ಅಹ್ಮದಾಬಾದ್ ಪೀಠವು ಹೊರಡಿಸಿದ ಆದೇಶದ ಆಧಾರದ ಮೇಲೆ ಪುನರ್ ಪರಿಶೀಲನಾ ಅರ್ಜಿಯನ್ನು ಪುರಸ್ಕರಿಸಿರುವುದಿಲ್ಲ ಅಥವಾ ದಿನಾಂಕ 23.07.2015ರ ಗುಜರಾತ್ ಉಚ್ಚ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ಸಹ ಅವಲಂಬಿಸಿರುವುದಿಲ್ಲ. ನ್ಯಾಯಾಧಿಕರಣವು, ಮಗುವಿನ ಔರಸತ್ವ ಅಥವಾ ಅನೌರಸತ್ವವು ನ್ಯಾಯಾಲಯದ ಮುಂದೆ ಯಾವುದೇ ವಿವಾದವಾಗಿರುವುದಿಲ್ಲವೆಂಬ ಸ್ಥೂಲ ತತ್ವಗಳ ಮೂಲಕ ಪರಿಶೀಲಿಸಿದೆ ಮತ್ತು ಎರಡನೇ ಎದುರುದಾರನನ್ನು ಅನುಕಂಪ ಆಧಾರದ ನೇಮಕಾತಿಯ ಪರಿಗಣನೆಗೆ ಹಕ್ಕುಳ್ಳದ್ದಾಗಿರುತ್ತದೆಯೆಂಬುದು ನ್ಯಾಯಾಧಿಕರಣಕ್ಕೆ ಕಂಡುಬಂದಿದೆ.

11. ಈ ಹಂತದಲ್ಲಿ ನಾವು, ಈ ನ್ಯಾಯಾಲಯವು ತೆಗೆದುಕೊಂಡ ಅಭಿಪ್ರಾಯವನ್ನು ಉಪಯುಕ್ತವಾಗಿ ಉಲ್ಲೇಖಿಸಬಹುದು. ನಿರ್ಧರಿಸಲಾದ

***ಭಾರತ ಒಕ್ಕೂಟ –ವಿರುದ್ಧ– ಶ್ರೀಮತಿ ನಿತ್ಯಾ ಎಸ್.ಇ.*** [1] ಪ್ರಕರಣದಲ್ಲಿ ಸಂಬಂಧಪಟ್ಟ ವಿಷಯದಲ್ಲಿ, ಸೇವೆಯಲ್ಲಿರುವಾಗ ಮೃತರಾದ ರೈಲ್ವೆ ನೌಕರನ ಸದಸ್ಯರುಗಳ ಅನುಕಂಪ ಆಧಾರಿತ ನೇಮಕಾತಿಯ ಪರಿಗಣನೆಗಾಗಿ ಪ್ರಶ್ನೆಯನ್ನು ಎತ್ತಲಾಗಿದೆ. ಮುಖ್ಯ ಸುತ್ತೋಲೆಯನ್ನು ಆಧರಿಸುವ ಮೂಲಕ ಈ ನ್ಯಾಯಾಲಯವು ಕಂಡಿಕೆ–10 ರಲ್ಲಿ ಹೀಗೆ ಅಭಿಪ್ರಾಯಪಟ್ಟಿದೆ.

> 10. ಅನುಕಂಪದ ಆಧಾರದ ಮೇಲಿನ ನೇಮಕಾತಿಗೆ ಸಂಬಂಧಪಡುವಷ್ಟರಮಟ್ಟಿಗೆ ಅನುಬಂಧ–ಡಿ ಪ್ರಕಾರ ಮುಖ್ಯ ಸುತ್ತೋಲೆ ಸಂ. 16ರ ಪೂರಕ ಸುತ್ತೋಲೆ ಸಂ. 5ನ್ನು ದೃಷ್ಟಿಯಲ್ಲಿಟ್ಟುಕೊಂಡು ಇದನ್ನು ಅನುಮತಿಸಲಾಗುವುದಿಲ್ಲ. ಸದರಿ ಸುತ್ತೋಲೆಯನ್ನು ಹೀಗೆ ಓದಲಾಗಿದೆ:
>
> *"ಎರಡನೇ ಪತ್ನಿಗೆ ಜನಿಸಿದ ಮಕ್ಕಳೊಂದಿಗೆ ಒಬ್ಬ ವಿಧವೆಯನ್ನು ಅಗಲಿ ದಿನನಿತ್ಯದ ಉದ್ಯೋಗದಲ್ಲಿ ಅಸುನೀಗಿರುವ ರೈಲ್ವೆ ನೌಕರರ ಪ್ರಕರಣದಲ್ಲಿ ನ್ಯಾಯಾಲಯ ಆದೇಶಗಳ ಸಲುವಾಗಿ ಇಬ್ಬರೂ ವಿಧವೆಯರು ಇತ್ಯರ್ಥ ಬಾಕಿಗಳನ್ನು ಹಂಚಿಕೊಳ್ಳುವಾಗ ಅಥವಾ ಅನ್ಯಥಾ ಮತಸಂಬಂಧಿ ಕಾನೂನು ಇತ್ಯಾದಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ವಿಶೇಷ ಸನ್ನಿವೇಶಗಳಲ್ಲಿ ಎರಡನೇ ವಿವಾಹವನ್ನು ಆಡಳಿತವು ಅನುಮತಿಸಿದ ಹೊರತು ಪ್ರತಿಯೊಂದು ಪ್ರಕರಣದ ಗುಣಾವಗುಣಗಳ ಆಧಾರದ ಮೇಲೆ, ಎರಡನೆಯ ವಿಧವೆಗೆ ಮತ್ತು ಅವಳ ಮಕ್ಕಳಿಗೆ ಅನುಕಂಪ ಆಧಾರಗಳ ಮೇಲೆ ನೇಮಕಾತಿಗಳನ್ನು ಪರಿಗಣಿಸಲಾಗುವುದಿಲ್ಲ.*

1. ರಿಟ್ ಅರ್ಜಿ ಸಂ. 45392/2013 ದಿನಾಂಕ: 22.02.2016

*2. ಎರಡನೇ ವಿವಾಹವನ್ನು ಅನುಮತಿಸಲಾಗಿಲ್ಲ ಎನ್ನುವ ಸಂಗತಿಯನ್ನು ಪ್ರಾರಂಭಿಕ ನೇಮಕಾತಿಯ ಬೇಡಿಕೆಯಲ್ಲಿ ನೀಡಲಾದ ನಿಬಂಧನೆಗಳು ಮತ್ತು ಷರತ್ತುಗಳಲ್ಲಿ ಸ್ಪಷ್ಟಪಡಿಸಿಲ್ಲ.*

*3. ಇದನ್ನು ದೃಷ್ಟಿಯಲ್ಲಿಟ್ಟುಕೊಳ್ಳಬಹುದಾಗಿದೆ ಮತ್ತು ಎರಡನೇ ವಿಧವೆ ಅಥವಾ ಅವಳ ಆಶ್ರಿತರಿಗೆ ಅನುಕಂಪದ ಆಧಾರದ ನೇಮಕಾತಿಗೆ ಸಂಬಂಧಿಸಿದ ಪ್ರಕರಣಗಳನ್ನು ರೈಲ್ವೆ ಮಂಡಳಿಗೆ ಕಳುಹಿಸುವ ಅಗತ್ಯವಿರುವುದಿಲ್ಲ."*

ಹಿಂದೆ ಸೂಚಿಸಲಾಗಿರುವುದರಿಂದ, ಎರಡನೇ ವಿಧವೆ ಮತ್ತು ಅವಳ ಮಕ್ಕಳಿಗೆ ಅನುಕಂಪ ಆಧಾರದ ಮೇಲೆ ನೇಮಕಾತಿಗಳನ್ನು, ಆಡಳಿತವು, ಮೃತಸಂಬಂಧಿ ಕಾನೂನಿನ ಕಾರಣವನ್ನು ತೆಗೆದುಕೊಂಡು ವಿಶೇಷ ಸನ್ನಿವೇಶಗಳಲ್ಲಿ ಎರಡನೇ ವಿವಾಹವನ್ನು ಅನುಮತಿಸಿದ ಹೊರತು ಪರಿಗಣಿಸಲಾಗಿರುವುದಿಲ್ಲ. ಮೇಲೆ ಸೂಚಿಸಲಾದಂತೆ ಎಸ್.ಎನ್. ಯತಿರಾಜುಲು ಅಥವಾ ಶ್ರೀಮತಿ ನಿತ್ಯಾ ಎಸ್.ಇ. (ಎರಡನೇ ಪತ್ನಿ) ಇವರಿಗೆ ಎರಡನೇ ಬಾರಿಗೆ ವಿವಾಹವಾಗಲು ಅವರಿಗೆ ಅನುಮತಿಸಿರಲಿಲ್ಲ. ಆದುದರಿಂದ ಎರಡನೇ ಪತ್ನಿಯಾಗಿರುವ ಶ್ರೀಮತಿ ನಿತ್ಯಾ ಎಸ್.ಇ ಅನುಕಂಪದ ಆಧಾರದ ಮೇಲಿನ ನೇಮಕಾತಿಗೆ ಹಕ್ಕುಳ್ಳವರಾಗಿರುವುದಿಲ್ಲ."

12. ಎರಡನೇ ವಿಧವೆ ಮತ್ತು ಅವಳ ಮಕ್ಕಳನ್ನು, ಮತಸಂಬಂಧಿ ಕಾನೂನನ್ನು ಲೆಕ್ಕಕ್ಕೆ ತೆಗೆದುಕೊಂಡು ವಿಶೇಷ ಸನ್ನಿವೇಶಗಳಲ್ಲಿ ಎರಡನೇ ವಿವಾಹವನ್ನು ಆಡಳಿತವು ಅನುಮತಿಸಿದ ಹೊರತು ಅನುಕಂಪದ ಆಧಾರದ ಮೇಲಿನ ನೇಮಕಾತಿಯನ್ನು ಪರಿಗಣಿಸಲಾಗುವುದಿಲ್ಲ ಎಂಬುದನ್ನು ಈಗಾಗಲೇ ಈ

ನ್ಯಾಯಾಲಯವು ದೃಷ್ಟಿಯಲ್ಲಿ ತೆಗೆದುಕೊಂಡಿದೆಯೆಂಬುದನ್ನು ಈ ಮೇಲಿನದು ತೋರಿಸುತ್ತದೆ.

13. ಮೃತರಾಗಿರುವ ಆದರೆ ಅವನ ಮತಸಂಬಂಧಿ ಕಾನೂನಿನ ಕಾರಣದಿಂದ ಎರಡನೇ ವಿವಾಹಮಾಡಿಕೊಂಡಿರುವ, ಆದರೆ ಎರಡನೇ ವಿವಾಹವನ್ನು ಮಾಡಿಕೊಳ್ಳುವ ಸಂಬಂಧ ರೈಲ್ವೆಯ ಅನುಮತಿಯನ್ನು ಪಡೆದುಕೊಂಡಿರದ ಸರ್ಕಾರಿ ನೌಕರನಿಗೆ ಸಂಬಂಧಿಸಿದ ಅನುಕಂಪದ ಆಧಾರದ ನೇಮಕಾತಿಯ ಮುಖ್ಯ ಸುತ್ತೋಲೆ ಮತ್ತು ಹಕ್ಕಿನ ಸಿಂಧುತ್ವದ ಸಂಬಂಧ ಪರಿಗಣನೆಗೆ ಸಂಬಂಧಿಸಿದ ಪ್ರಶ್ನೆಯನ್ನು ಮತ್ತೆ ತೆಗೆಯಲಾಗಿತ್ತು. ಮುಖ್ಯ ಸುತ್ತೋಲೆ ಮತ್ತು ಮತಸಂಬಂಧಿ ಕಾನೂನು ಹಾಗೂ ಸೇವಾ ಷರತ್ತುಗಳನ್ನು ಪರಿಗಣಿಸುವಾಗ ***ಮಹಮದ್ ಘೋಷ್ –ವಿರುದ್ಧ– ಭಾರತ ಒಕ್ಕೂಟ*** [2]ದ ಪ್ರಕರಣದಲ್ಲಿ ಈ ನ್ಯಾಯಾಲಯವು ಕಂಡಿಕೆ–5 ಮತ್ತು 6ರಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

> "5. ಯಾರೇ ನೌಕರನ ಮತಸಂಬಂಧಿ ಕಾನೂನು, ಒಂದು ಕೋನದಲ್ಲಿದ್ದರೆ, ಸೇವಾ ಷರತ್ತುಗಳನ್ನು ರೂಪಿಸಿರುವ ನೌಕರನೊಂದಿಗಿನ ಅವನ ಸಂಬಂಧ ಮತ್ತೊಂದು ಕೋನದಲ್ಲಿದೆಯೆಂಬುದನ್ನು ನಾವು ದಾಖಲಿಸಬಹುದು. ಅವನ ಮತಸಂಬಂಧಿ ಕಾನೂನಿನ ಕಾರಣದಿಂದ ಅಸಿಂಧುವಾಗಿರುವಲ್ಲಿ ಇದು ವಿಷಯವಾಗುವುದಿಲ್ಲ. ಅನುಕಂಪದ ಆಧಾರದ ನೇಮಕಾತಿಗೆ ಸಂಬಂಧಿಸಿದ ನೌಕರನ ಅವಲಂಬಿತ ಸದಸ್ಯನೊಂದಿಗೆ ನಿರ್ದಿಷ್ಟ ಹಕ್ಕನ್ನು ಸೇವಾ ಷರತ್ತು ಉಪಬಂಧಿಸಿದ್ದಲ್ಲಿ ಇದು ಬರೀ ವಿಷಯವಾಗಿರುತ್ತದೆ. ಅನುಕಂಪದ ನೇಮಕಾತಿಗೆ ನ್ಯಾಯಾಧಿಕರಣವು ಸಹ ಉಲ್ಲೇಖಿಸಿರುವ ರೈಲ್ವೆಯ ಮುಖ್ಯ ಸುತ್ತೋಲೆ ಸಂ.5ರ

2. ರಿಟ್ ಅರ್ಜಿ ಸಂ. 37318/2016, ದಿನಾಂಕ: 27.09.2016

ಪ್ರಕಾರ ಇದನ್ನು ಈ ಮುಂದಿನಂತೆ ವ್ಯಕ್ತವಾಗಿ ಉಪಬಂಧಿಸಲಾಗಿದೆ.

"ನ್ಯಾಯಾಲಯ ಆದೇಶಗಳ ಕಾರಣದಿಂದ ಇಬ್ಬರು ವಿಧವೆಯರು ಇತ್ಯರ್ಥದಲ್ಲಿರುವ ಬಾಕಿಗಳನ್ನು ಹಂಚಿಕೊಳ್ಳಬಹುದಾದಾಗ 2 ನೇ ಪತ್ನಿಗೆ ಹುಟ್ಟಿದ ಮಕ್ಕಳೊಂದಿಗೆ ಒಬ್ಬ ವಿಧವೆಗಿಂತ ಹೆಚ್ಚಿನವರನ್ನು ಬಿಟ್ಟು ದಿನನಿತ್ಯದ ಕಾರ್ಯದಲ್ಲಿ ಅಸುನೀಗಿರುವ ರೈಲ್ವೆ ನೌಕರರ ವಿಷಯದಲ್ಲಿ ಅಥವಾ ಪ್ರತಿಯೊಂದು ಗುಣಾವಗುಣಗಳ ಮೇಲೆ ಅನ್ಯಥಾ, ಮತಸಂಬಂಧಿ ಕಾನೂನು ಇತ್ಯಾದಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ವಿಶೇಷ ಸನ್ನಿವೇಶಗಳಲ್ಲಿ ಎರಡನೇ ವಿವಾಹವನ್ನು ಆಡಳಿತವು ಅನುಮತಿಸಿದ ಹೊರತು ಪರಿಗಣಿಸಲಾಗುವುದಿಲ್ಲ.

2. ಪ್ರಾರಂಭಿಕ ನೇಮಕಾತಿಯ ಬೇಡಿಕೆಯಲ್ಲಿ ಸೂಚಿಸಲಾದ ನಿಬಂಧನೆಗಳು ಮತ್ತು ಷರತ್ತುಗಳಲ್ಲಿ, ಎರಡನೇ ವಿವಾಹವನ್ನು ಅನುಮತಿಸಲಾಗಿರುವುದಿಲ್ಲ ಎಂಬ ಸಂಗತಿಯನ್ನು ತಪ್ಪದೆ ಸ್ಪಷ್ಟಪಡಿಸಲಾಗಿದೆ.

3. ಇದನ್ನು ದೃಷ್ಟಿಯಲ್ಲಿ ಇಟ್ಟುಕೊಳ್ಳಬಹುದಾಗಿದ್ದು, ಎರಡನೇ ವಿಧವೆಗೆ ಅಥವಾ ಅವಳ ಆಶ್ರಿತರಿಗೆ ಅನುಕಂಪದ ನೇಮಕಾತಿ ಮಾಡುವುದಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ರೈಲ್ವೆ ಮಂಡಳಿಗೆ ಕಳುಹಿಸುವ ಅಗತ್ಯ ಇರುವುದಿಲ್ಲ."

> 6. ಮೇಲೆ ಹೇಳಲಾದ ಸುತ್ತೋಲೆಯನ್ನು ಪರಿಗಣಿಸಿದರೆ, ಸೇವಾ ಷರತ್ತುಗಳ ಪ್ರಕಾರ, ಎರಡನೇ ವಿವಾಹದಿಂದ ಆದ ವಿಧವೆ ಮತ್ತು ಅವರ ಮಕ್ಕಳನ್ನು ಆಡಳಿತದ ಅನುಮತಿಯನ್ನು ಪಡೆದುಕೊಂಡ ನಂತರ ಎರಡನೇ ವಿವಾಹವನ್ನು ನೆರವೇರಿಸಿದ ಹೊರತು ಅನುಕಂಪದ ನೇಮಕಾತಿಗೆ ಪರಿಗಣಿಸಲು ಹಕ್ಕುಳ್ಳವರಾಗಿರತಕ್ಕದ್ದಲ್ಲ. ನಮ್ಮ ದೃಷ್ಟಿಯಲ್ಲಿ, ಮತಸಂಬಂಧಿ ಕಾನೂನಿನ ಕಾರಣದಿಂದ ಅನುಕಂಪದ ನೇಮಕಾತಿಗೆ ಸಂಬಂಧಿಸಿದ ಉಪಬಂಧವನ್ನು ವಿನಿಯಮನಗೊಳಿಸುವುದಕ್ಕಾಗಿ ಸೇವಾ ಷರತ್ತನ್ನು ಉಪಬಂಧಿಸಿದ್ದರೆ, ಅಲ್ಲದೆ, ನಿರ್ದಿಷ್ಟವಾಗಿ, ಅಂಥ ಸೇವಾ ಷರತ್ತು ಪ್ರಶ್ನೆಯಲ್ಲಿಲ್ಲದಿರುವಾಗ ಅಥವಾ ಯಾವುದೇ ಸಮಯದಲ್ಲಿ ಸಂಬಂಧಪಟ್ಟ ನೌಕರನ ಜೀವನಾವಧಿಯಲ್ಲಿ ಪ್ರಶ್ನೆಯಲ್ಲಿರುವಾಗ, ಅಂಥ ಸೇವಾ ಷರತ್ತನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ ಅಥವಾ ಅನೂರ್ಜಿತಗೊಳಿಸಲು ಸಾಧ್ಯವಿಲ್ಲ.

14. ಅಂತಿಮವಾಗಿ, ಈ ನ್ಯಾಯಾಲಯವು, ಅನುಕಂಪದ ನೇಮಕಾತಿಗೆ ಸಂಬಂಧಿಸಿದ ಅರ್ಜಿಯನ್ನು ವಜಾಗೊಳಿಸುವ ಸಂಬಂಧ ನ್ಯಾಯಾಧಿಕರಣವು ತಳೆದ ಅಭಿಪ್ರಾಯದಲ್ಲಿ ಹಸ್ತಕ್ಷೇಪ ಮಾಡಿರುವುದಿಲ್ಲ.

15. ನ್ಯಾಯಾಧಿಕರಣದ ಅಹ್ಮದಾಬಾದ್ ಪೀಠವು ಇದನ್ನು ಪರಿಗಣಿಸಿರುವುದು ಸತ್ಯವಾದುದಾಗಿದೆ. ಈ ನ್ಯಾಯಾಲಯವು ಈಗಾಗಲೇ ತಳೆದ ಹಿಂದೆ ಹೇಳಲಾದ ಅಭಿಪ್ರಾಯಗಳನ್ನು ಗಮನಕ್ಕೆ ತಂದಿರುವುದಿಲ್ಲ ಅಥವಾ ನ್ಯಾಯಾಧಿಕರಣದ ಅಹ್ಮದಾಬಾದ್ ಪೀಠವು ಪರಿಗಣಿಸಿರುವುದಿಲ್ಲ, ಹಾಗೆಯೇ ವಿಷಯವನ್ನು ತರದಿದ್ದಾಗ, ಗುಜರಾತ್‌ನ ಉಚ್ಚ ನ್ಯಾಯಾಲಯದ ಮುಂದೆ ಪರಿಗಣನೆಗಾಗಿ ತರದಿದ್ದಾಗ, ಪ್ರಕರಣ ಹೀಗಿರುತ್ತದೆ. ನಮ್ಮ ದೃಷ್ಟಿಯಲ್ಲಿ, ಈ ನ್ಯಾಯಾಲಯದ ಎರಡು

ಬದ್ಧತಾ ನಿರ್ಣಯಗಳು ಈಗಾಗಲೇ ಇರುವಾಗ, ಒಂದು ನಿರ್ಣಯದಲ್ಲಿ ನಮ್ಮಲ್ಲಿ ಒಬ್ಬರು (ಜಯಂತ್ ಪಟೇಲ್, ನ್ಯಾಯಮೂರ್ತಿಗಳು) ಸದಸ್ಯರಾಗಿದ್ದರು, ಗೌರವಾದರದೊಂದಿಗೆ ನ್ಯಾಯಾಧಿಕರಣದ ಅಹ್ಮದಾಬಾದ್ ಪೀಠವು ತೆಗೆದುಕೊಂಡ ಅಭಿಪ್ರಾಯವನ್ನು ಮೇಲೆ ಉಲ್ಲೇಖಿಸಲಾದ ನಿರ್ಣಯವನ್ನು ದೃಢಪಡಿಸಿ, ಗುಜರಾತ್ ಉಚ್ಚ ನ್ಯಾಯಾಲಯವು ತಳೆದ ಅಭಿಪ್ರಾಯವನ್ನು ನಾವು ಒಪ್ಪಲು ಸಾಧ್ಯವಿಲ್ಲ.

16. ಹಾಗೆಯೇ ನಮ್ಮ ಅಭಿಪ್ರಾಯದಂತೆ, ಈ ನ್ಯಾಯಾಲಯದ ಸಮನ್ವಯ ಪೀಠದ ಎರಡು ನಿರ್ಣಯಗಳಿರುವಾಗ, ಅವುಗಳಿಗೆ, ಯಾವುದೇ ಸಂದರ್ಭದಲ್ಲಿ ನಾವು ಬದ್ಧರಾಗಿರುತ್ತೇವೆ. ಹಾಗಾಗಿ, ಎದುರದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಎತ್ತಿದ ವಾದವನ್ನು ನಾವು ಒಪ್ಪಲು ಸಾಧ್ಯವಿಲ್ಲ.

17. ಮೇಲಿನವುಗಳಲ್ಲದೆ, ವಿಳಂಬದ ಪ್ರಶ್ನೆಯನ್ನು ಒಂದು ಪರಿಗಣಿಸಿದರೆ, ಯಾವುದೇ ಅನುಕಂಪದ ನೇಮಕಾತಿಯ ಅವಶ್ಯಕ ಉದ್ದೇಶಕ್ಕಾಗಿ ತಕ್ಷಣದ ಬೆಂಬಲದ ರೂಪದಲ್ಲಿ ಮೃತ ಸರ್ಕಾರಿ ನೌಕರನ ಕುಟುಂಬಕ್ಕೆ ಸಾಂತ್ವನ ನೀಡುವುದಾಗಿದೆ. ಅನುಕಂಪದ ನೇಮಕಾತಿಗೆ ಸಂಬಂಧಿಸಿದ ಅಂಥ ಉಪಬಂಧವನು ಅನಿರ್ದಿಷ್ಟ ಅವಧಿಗೆ ಹಕ್ಕನ್ನು ಹೊಂದಿರುವರೆಂದು ಓದಿಕೊಳ್ಳಲು ಸಾಧ್ಯವಿಲ್ಲ. ಸುಮಾರು 18 ವರ್ಷಗಳ ಸಮಯ ಕಳೆದಿದೆ. ಆದುದರಿಂದ, ಅನುಕಂಪದ ನೇಮಕಾತಿಗೆ ಮಾಡಲಾದ ಉಪಬಂಧವನ್ನು 18 ವರ್ಷಗಳ ಆ ಅವಧಿಯ ನಂತರವೂ ಸುಮಾರು 15 ವರ್ಷಗಳ ಅವಧಿ ನಂತರ ಅರ್ಜಿಯ ದಿನಾಂಕದಿಂದ ಪರಿಗಣಿಸಿದ್ದರೆ ಅದನ್ನು ಹಕ್ಕೆಂದು ದೃಢವಾಗಿ ಹೇಳಲಾಗುವುದಿಲ್ಲ. ಹಾಗಾಗಿ, ಪುನರ್ ಪರಿಶೀಲನಾ ಅರ್ಜಿಯಲ್ಲಿ ಕೆಳಗಿನ ನ್ಯಾಯಾಧಿಕರಣವು ಹೊರಡಿಸಿದ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ಸಿಂಧುವಾದ ಆಧಾರವಿರುತ್ತದೆ.

18. ಪುನರ್ ಪರಿಶೀಲನಾ ಅಧಿಕಾರವನ್ನು, ದಾಖಲೆಯ ಎದುರಿನಲ್ಲಿ, ದೋಷಯುಕ್ತವೆನ್ನುವಷ್ಟರ ಮಟ್ಟಿಗೆ ಮೇಲುನೋಟಕ್ಕೆ ಸೀಮಿತಗೊಳಿಸಲಾಗಿದೆ ಎಂಬುದನ್ನು ಸಹ ನಾವು ದಾಖಲಿಸಬಹುದಾಗಿದ್ದು, ಇದನ್ನು ಮರೆಮಾಚುವ

ಅಪೀಲಾಗಿರುವುದಿಲ್ಲ. ಪುನರ್ ಪರಿಶೀಲನಾ ಅಧಿಕಾರವ್ಯಾಪ್ತಿಯ ವ್ಯಾಪ್ತಿ ಮತ್ತು ಎಲ್ಲೆಯನ್ನು ಪರಿಗಣಿಸಿದರೆ, ಮುಖ್ಯ ಮೂಲ ಅಪೀಲಿನಲ್ಲಿ ದಿನಾಂಕ 25.07.2013ರ ಮೊದಲಿನ ಆದೇಶಗಳ ಗುಣಾವಗುಣಗಳ ಆಧಾರದ ಮೇಲೆ ಅರ್ಜಿಯನ್ನು ವಾದವನ್ನು ಒಪ್ಪಿಕೊಳ್ಳದಿದ್ದಾಗ ಅದರ ಕಾರಣ ಮಾತ್ರದಿಂದಲೇ ತರುವಾಯವಾಗಿ, ಸಿವಿಲ್ ನ್ಯಾಯಾಲಯದಲ್ಲಿ ಉದ್ಭವಗೊಂಡ ಕೆಲವು ವ್ಯವಹರಣೆಗಳಿಗೆ ಮೊದಲಿನ ಆದೇಶವನ್ನು ಪುನರ್ ಪರಿಶೀಲನಾ ಸಿಂಧುವಾದ ಆಧಾರವಿರಲಿಲ್ಲ. ಅಷ್ಟೇ ಅಲ್ಲದೆ, ಸೇವಾ ಪ್ರಯೋಜನದ ಮೂಲಕ ಆಸ್ತಿಯ ಉತ್ತರಾಧಿಕಾರಕ್ಕಾಗಿ ಮಕ್ಕಳ ಹಕ್ಕುಗಳನ್ನು ಅಥವಾ ಅನ್ಯಥಾ ಸೇವಾ ಷರತ್ತಿನ ರೂಪದ ಅನುಕಂಪದ ನೇಮಕಾತಿಗೆ ಉಪಬಂಧವನ್ನು ಸಮೀಕರಿಸಲು ಸಾಧ್ಯವಾಗುವುದಿಲ್ಲ. ನ್ಯಾಯಾಧಿಕರಣವು, ಪರಿಷ್ಕರಣೆಗೆ ಸಂಬಂಧಿಸಿದ ಆಯಾಮಗಳನ್ನು ಪರಿಗಣಿಸುವಾಗಲೂ ಸಹ ಹಿಂದೆ ಹೇಳಲಾದ ಆಯಾಮಗಳನ್ನು ಪರಿಗಣಿಸಿಲ್ಲ. ನಮ್ಮ ಪರಿಗಣಿತ ದೃಷ್ಟಿಯಲ್ಲಿ, ಪುನರ್ ಪರಿಶೀಲನಾ ಅಧಿಕಾರವನ್ನು ಚಲಾಯಿಸುವಾಗ ನ್ಯಾಯಾಧಿಕರಣವು ಪುನರ್ ಪರಿಶೀಲನಾ ವ್ಯಾಪ್ತಿಯನ್ನು ಮೀರಿ ಹೋಗಿರುವುದರಿಂದ ಆದೇಶವು ಅಧಿಕಾರವ್ಯಾಪ್ತಿಯನ್ನು ಮೀರಿದೆಯೆಂದು ಹೇಳಬಹುದಾಗಿರುತ್ತದೆ.

19. ಮೇಲೆ ಹೇಳಲಾದುದನ್ನು ದೃಷ್ಟಿಯಲ್ಲಿಟ್ಟುಕೊಂಡು, ದಿನಾಂಕ 13.05.2015ರ 'ಸಿ' ಅನುಬಂಧದ ಪುನರ್ ಪರಿಶೀಲನಾ ಅರ್ಜಿಯನ್ನು ಪರಿಗಣಿಸಿ ಕೆಳಗಿನ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವು ರದ್ದುಗೊಳಿಸಲು ತಕ್ಕುದಾಗಿದ್ದು, ಇದನ್ನು ತಳ್ಳಿಹಾಕಲಾಗಿದೆ. ಹಾಗಾಗಿ, ಇದನ್ನು ರದ್ದುಗೊಳಿಸಲಾಗಿದೆ ಮತ್ತು ತಳ್ಳಿಹಾಕಲಾಗಿದೆ. ಫಲಿತಾಂಶವಾಗಿ, ಪುನರ್ ಪರಿಶೀಲನಾ ಅರ್ಜಿಯು ವಜಾಗೊಂಡಿದೆಯೆಂದು ಭಾವಿಸತಕ್ಕದ್ದು. ಮೇಲೆ ಹೇಳಲಾದ ವ್ಯಾಪ್ತಿಯ ಮಟ್ಟಿಗೆ ಅರ್ಜಿಯನ್ನು ಪುರಸ್ಕರಿಸಲಾಗಿದೆ. ನಿಯಮವನ್ನು ನಿರುಪಾಧಿಕಗೊಳಿಸಲಾಗಿದೆ. ವೆಚ್ಚಗಳ ಸಂಬಂಧದಲ್ಲಿ ಆದೇಶವಿರುವುದಿಲ್ಲ.

---